# ಮಹಾನ್ ಚಿಂತಕರು ಕಂಡಂತೆ ಶ್ರೀರಾಮಕೃಷ್ಣರು

ಡಾ. ಎಚ್. ಪಾಂಡುರಂಗ ವಿಠಲ

ಕ್ರೈಸ್ತ ಧರ್ಮದ ಪಾರಮ್ಯವನ್ನು ಎತ್ತಿಹಿಡಿಯಲೆಂದು ಚಿಕಾಗೋದಲ್ಲಿ ಆಯೋಜಿಸಿದ್ದ ವಿಶ್ವಧರ್ಮ ಸಮ್ಮೇಳನವು ಪಾಶ್ಚಾತ್ಯರಿಗೆ ಇತರ ಧರ್ಮಗಳ ಶ್ರೀಮಂತ ಆಧ್ಯಾತ್ಮಿಕ ಪರಂಪರೆಯನ್ನು ಪರಿಚಯ ಮಾಡಿಕೊಟ್ಟಿತು. ಅಲ್ಲಿ ಪ್ರತಿಯೊಂದು ಧರ್ಮದ ಪ್ರತಿನಿಧಿಗಳೂ ತಮ್ಮ ತಮ್ಮ ಪಂಥದ ಬಗ್ಗೆ ಮಾತನಾಡಿದರೆ, ಭಾರತದ ಪುರಾತನ ಆಧ್ಯಾತ್ಮಿಕ ಪರಂಪರೆಯ ಪ್ರತಿನಿಧಿಯಾಗಿದ್ದ ಸ್ವಾಮಿ ವಿವೇಕಾನಂದರು, ವಿಶ್ವಚೇತನವು ಈ ಎಲ್ಲ ಧರ್ಮಗಳನ್ನೂ ಒಳಗೊಳ್ಳುತ್ತದೆ ಎಂದು ಘೋಷಿಸಿದರು. ಶ್ರೀರಾಮಕೃಷ್ಣರು ಅನುಭವಪೂರ್ವಕವಾಗಿ ಅರಿತುಕೊಂಡ ಸರ್ವಧರ್ಮ ಸಮನ್ವಯ, ಭಾರತೀಯ ಸಹಿಷ್ಣುತೆ ಹಾಗೂ ಸ್ವೀಕಾರಗಳು ಹೀಗೆ ಜಗತ್ತಿನ ಗಮನಕ್ಕೆ ಬಂದವು. ಬಂಗಾಳದ ಹೊರಗಿನ ಭಾರತದ ಹಾಗೂ ಯುರೋಪಿನ ತತ್ವಜ್ಞಾನಿಗಳು ಮತ್ತು ವಿಚಾರವಂತರಿಗೆ, ಈ ಮಹಾನ್ ಸಂತರ ಬಗೆಗೆ ತಿಳಿದು ಬಂದಿತು. ಅವರು ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳನ್ನು ವಿಶೇಷವಾಗಿ ಅಧ್ಯಯನ ಮಾಡಲು, ಆ ಮೂಲಕ ಭಾರತೀಯ ಆಧ್ಯಾತ್ಮಿಕತೆಯ ಬಗ್ಗೆ ತಿಳಿದುಕೊಳ್ಳಲು ಆರಂಭಿಸಿದರು. ಅಂತಹ ಕೆಲವು ಧೀಮಂತರು ಶ್ರೀರಾಮಕೃಷ್ಣರ ಜೀವನ, ವಿಚಾರಗಳಿಂದ ಪ್ರಭಾವಿತರಾಗಿ ನುಡಿದ ಮಾತುಗಳ ಸಾರ ಈ ಲೇಖನದ ವಸ್ತುವಿಷಯ.



ಸ್ವಾಮಿ ವಿವೇಕಾನಂದರು ಅಮೆರಿಕ, ಯುರೋಪುಗಳಲ್ಲಿ ವೇದಾಂತವನ್ನು ಬೋಧಿಸುತ್ತಿದ್ದಾಗ ಶ್ರೀರಾಮಕೃಷ್ಣರ ಬಗೆಗೆ ಇಂಗ್ಲಿಷಿನಲ್ಲಿ ಲಭ್ಯವಿದ್ದ ಸಾಹಿತ್ಯ ತುಂಬ ಕಡಿಮೆ. ಆದರೂ ಮಿಸ್ ಜೋಸೆಫಿನ್ ಮ್ಯಾಕ್ಲೌಡ್, ಧನಗೋಪಾಲ ಮುಖರ್ಜಿ ಮೊದಲಾದವರ ಸಹಕಾರದಿಂದ ಫ್ರಾನ್ಸ್ ದೇಶದ ತತ್ತ್ವಜ್ಞಾನಿ ರೊಮೇ ರೋಲಾ ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ಬರೆದರು. ಅವರು ಹೀಗೆನ್ನುತ್ತಾರೆ:

> ಶ್ರೀರಾಮಕೃಷ್ಣರು ಸಮಸ್ತ ಮಾನವ ಜನಾಂಗಕ್ಕೆ ಸೇರಿದವರು. ಹೀಗಾಗಿ ಅವರ ವ್ಯಕ್ತಿತ್ವ ಮತ್ತು ಬೋಧನೆಗಳು ಪಾಶ್ಚಾತ್ಯ ಮತ್ತು ಪೌರಸ್ತ್ಯ ದೇಶಗಳ ಧೀಮಂತರೆಲ್ಲರ ಗಮನ ಸೆಳೆದುದರಲ್ಲಿ ಆಶ್ಚರ್ಯವಿಲ್ಲ. ಅಂತಹ ಕೆಲವು ಮಹಾನ್ ವ್ಯಕ್ತಿಗಳ ಹೇಳಿಕೆಗಳನ್ನು ಸಂಕಲಿಸಿ ಕೊಟ್ಟಿರುವ ಲೇಖಕರು ಕನ್ನಡ ಅಧ್ಯಾಪಕರು, ಆಶ್ರಮದ ಭಕ್ತರು.

“ಯುರೋಪಿಗೆ, ಅದು ಇಲ್ಲಿಯವರೆಗೆ ಕಂಡರಿಯದ ‘ರಾಮಕೃಷ್ಣ’ ಎಂಬ ಹೆಸರಿನ ಒಂದು ಹೊಸ ರಸಭರಿತ ಫಲವನ್ನು, ಆತ್ಮಸಂದೇಶವೊಂದನ್ನು, ಭಾರತದ ಸ್ವರಮೇಳವೊಂದನ್ನು ನಾನು ತರುತ್ತಿದ್ದೇನೆ.”

“ಯಾರ ಮೂರ್ತಿಯನ್ನು ನಾನಿಲ್ಲಿ ಆವಾಹಿಸುತ್ತಿದ್ದೇನೆಯೋ ಆ ವ್ಯಕ್ತಿಯು ಮೂವತ್ತು ಕೋಟಿ ಜನರ, ಎರಡು ಸಹಸ್ರ ವರ್ಷಗಳ ಆಧ್ಯಾತ್ಮಿಕ ಜೀವನದ ಪರಾಕಾಷ್ಠೆಯಾಗಿದ್ದರು. ಅವರು ಕಾಲವಾಗಿ ನಲವತ್ತು ವರ್ಷವಾಗಿದ್ದರೂ ಸಹ ಅವರ ಚೇತನ ಇಂದಿಗೂ ಆಧುನಿಕ ಭಾರತವನ್ನು ಪ್ರಚೋದಿಸುತ್ತಿದೆ.”

“ಶ್ರೀರಾಮಕೃಷ್ಣರು ಗಾಂಧಿಯಂತೆ ತಮ್ಮ ರಾಜಕೀಯ ವರ್ಚಸ್ಸಿನಿಂದ ಕಂಗೊಳಿಸಿದವರಲ್ಲ ಅಥವಾ ಗಯಟೆ, ರವೀಂದ್ರನಾಥ ಠಾಕೂರರ ಹಾಗೆ ಕಲೆ ಮತ್ತು ಬೌದ್ಧಿಕ ಕ್ಷೇತ್ರದಲ್ಲಿ ಮಹಾ ವ್ಯಕ್ತಿಯೂ ಆಗಿರಲಿಲ್ಲ. ಅವರು ಬಂಗಾಳದ ಒಂದು ಪುಟ್ಟ ಹಳ್ಳಿಯ ಒಬ್ಬ ಬ್ರಾಹ್ಮಣ ಮಾತ್ರ. ಅವರ ಬಾಹ್ಯ ಜೀವನ ಒಂದು ಪರಿಮಿತ ಚೌಕಟ್ಟಿನಲ್ಲಿದ್ದು ಯಾವ ಪವಾಡಸದೃಶ ಘಟನೆಯನ್ನೂ ಹೊಂದಿರಲಿಲ್ಲ. ಅವರ ಪ್ರಭಾವ ಅಂದಿನ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಯ ಗೊಂದಲಗಳಿಗೆ ಹೊರತಾಗಿತ್ತು. ಆದರೆ ಅವರ ಆಂತರಂಗಿಕ ಜೀವನ ಇಡೀ ಜನಾಂಗದ ಮತ್ತು ದೇವತೆಗಳ ಸಮೂಹವನ್ನು ಒಳಗೊಂಡಿತ್ತು. ನಿಜಕ್ಕೂ ಅವರ ಜೀವನವು ಸಕಲ ಶಕ್ತಿಗಳ ಮೂಲವಾದ ದಿವ್ಯ ಆತ್ಮಶಕ್ತಿಯ ಒಂದು ಅಭಿವ್ಯಕ್ತಿಯಾಗಿತ್ತು.”

ರೊಮೇ ರೋಲಾ ಆಗ ತಾನೇ ಮುಗಿದಿದ್ದ ವಿಶ್ವಯುದ್ಧದಿಂದ ದುಃಖಿತರಾಗಿದ್ದರು. ಆದರೂ ಮಾನವ ಹೃದಯದಲ್ಲಿ ಅಡಗಿರುವ ಭಗವತ್‌ಶಕ್ತಿಯಲ್ಲಿ ಅವರಿಗೆ ಅಪಾರ ವಿಶ್ವಾಸ. ಆ ಅಂತರಂಗದ ಬಾಗಿಲನ್ನು ತೆರೆಯಬಲ್ಲ ಕೀಲಿ ಅವರಿಗೆ ಸಿಕ್ಕಿರಲಿಲ್ಲ. ಜನಸಮುದಾಯದ ಮೇಲೆ ಪ್ರಭಾವ ಬೀರಿದ್ದ ಶೇಕ್ಸ್‌ಪಿಯರ್, ಬೀಥೋವೆನ್, ಟಾಲ್‌ಸ್ಟಾಯ್ ಮೊದಲಾದ ಯಾರ ಬಳಿಯೂ ಆ ದಿವ್ಯ ಕೀಲಿಕೈ ಇರಲಿಲ್ಲ. ಹೀಗಾಗಿ, ಶ್ರೀರಾಮಕೃಷ್ಣರ ಜೀವನ ಚರಿತ್ರೆ ಓದಿದೊಡನೆ ರೋಲಾ, “ಆಹಾ! ಇದೋ ಕ್ರಿಸ್ತ ಮತ್ತೆ ಜನ್ಮ ತಾಳಿದ್ದಾನೆ, ಅಂತರಂಗದ ದಿವ್ಯಸಾಮ್ರಾಜ್ಯಕ್ಕೆ ಕೀಲಿಕೈ ನನಗೆ ಸಿಕ್ಕೇ ಬಿಟ್ಟಿತು!” ಎಂದು ಉದ್ಗರಿಸಿದರು. ಹೀಗಾಗಿ ಸಕಲ ಶಕ್ತಿಗಳ

(ಚಿತ್ರ: ಮಾಲ್ವಿನಾ ಹಾಫ್ಮನ್ ಎಂಬ ಪಾಶ್ಚಾತ್ಯ ಶಿಲ್ಪಕಾರನ ಶಿಲ್ಪಕೃತಿ)

ಮೂಲವಾದ ಆದ್ಯಾಶಕ್ತಿಯ ಅಂಶವೇ ಶ್ರೀರಾಮಕೃಷ್ಣರು ಎಂದು ರೋಮೇ ರೋಲಾ ಅಭಿಪ್ರಾಯ ಪಡುತ್ತಾರೆ.

ಮ್ಯಾಕ್ಸ್ ಮುಲ್ಲರ್ ರೋಮೇ ರೊಲಾ ಅವರಿಗಿಂತ ಹಿಂದೆಯೇ, ಶ್ರೀರಾಮಕೃಷ್ಣರ ಜೀವನ, ಬೋಧನೆಗಳನ್ನು ಕುರಿತು ಪುಸ್ತಕವೊಂದನ್ನು ಬರೆದಿದ್ದರು. ವೇದಾಂತವೇ ಶ್ರೀರಾಮಕೃಷ್ಣರ ಜೀವನ, ಬೋಧನೆಗಳ ತಿರುಳು ಎಂದು ಬಗೆದಿದ್ದರು ಕೂಡ. ಅವರು ಹೀಗೆ ಬರೆದಿದ್ದಾರೆ:

"ಅವರು ಮಹಾತ್ಮರು ಮಾತ್ರವಲ್ಲ, ಮೂಲಭೂತ ಚಿಂತನೆಗಳುಳ್ಳವರು, ಇತರರ ಹೇಳಿಕೆಗಳನ್ನು ಉದ್ಧರಿಸದೆ, ವಿಶ್ವದ ಬಗ್ಗೆ ಆಳವಾದ ಧ್ಯಾನ ಮಾಡಿದವರು. ಮೊದಲಿನಿಂದಲೂ ತೀವ್ರತರವಾದ ಯೋಗವನ್ನು ಆಚರಿಸಿದವರು. ಇದು ಸಮಾಧಿಯನ್ನೂ ಆನಂದಪರವಶತೆಯ ಸ್ಥಿತಿಯಲ್ಲಿ ದಿವ್ಯವಾದ ಮಾತುಗಳನ್ನೂ ಹೇಳುವ ಶಕ್ತಿಯನ್ನು ತಂದುಕೊಡುವುದು. ನಾವು ಇದನ್ನು ಅರಿಯಲಾರೆವಾದರೂ, ಈ ಮಹಾತ್ಮನ ವಿಷಯದಲ್ಲಿ ಇದು ಸತ್ಯ ಇದನ್ನು ಕಂಡು ನಾವು ಅಚ್ಚರಿಪಡಬಹುದಷ್ಟೆ. ಮನುಷ್ಯನಲ್ಲಿರುವ ದೈವೀಪ್ರಜ್ಞೆ ಇವರ ನುಡಿಗಳಲ್ಲಿದೆ. ಇದನ್ನು ವಿಗ್ರಹಾರಾಧಕರ ಸಹಿತ ಎಲ್ಲರೂ ಅರಿಯಬಲ್ಲರು. ಭಗವಂತನಲ್ಲಿಯೇ ನಾವು ಇದ್ದುಕೊಂಡು, ಅದರಲ್ಲೇ ಚಲಿಸುತ್ತ ನಮ್ಮ ಅಸ್ತಿತ್ವವನ್ನು ಪಡೆಯುತ್ತಿದ್ದೇವೆ. ದೈವೀಸಾನ್ನಿಧ್ಯದ ಈ ನಿರಂತರ ಪ್ರಜ್ಞೆಯು, ಹಿಂದೂಗಳಲ್ಲದವರೂ ಸಹ ತಮ್ಮ ಹೃದಯಗಳನ್ನೂ ಕೈಗಳನ್ನೂ ಸೇರಿಸಿ, ಒಂದು ಸಮಾನ ವಿಶ್ವಚೈತನ್ಯವನ್ನು ಆರಾಧಿಸಲು, ಭವಿಷ್ಯದ ಒಂದು ದೇವಾಲಯವನ್ನು ಸ್ವಲ್ಪ ಕಾಲದಲ್ಲೇ ಕಟ್ಟಲು, ಸಾಮಾನ್ಯ ನೆಲೆಯೊಂದನ್ನು ಒದಗಿಸುವುದೆಂದು ಆಶಿಸೋಣ."

ರವೀಂದ್ರನಾಥ ಠಾಕೂರರು ಬರೆದ ಒಂದು ಪದ್ಯದಲ್ಲಿ ಶ್ರೀರಾಮಕೃಷ್ಣರ ಬಗೆಗೆ ಅವರಿಗಿದ್ದ ಗೌರವ ವ್ಯಕ್ತವಾಗಿದೆ:

**ಸಕಲ ಸಾಕ್ಷಾತ್ಕಾರದ ಮಾನಸಸರೋವರದಿಂದ ಹರಿದುಬರುವ**
**ಬಹುಪೂಜೆಯ ವಿವಿಧ ವಾಹಿನಿಗಳು**
**ನಿನ್ನ ಧ್ಯಾನಸಮುದ್ರದಲ್ಲಿ ಸಂಲಗ್ನವಾಗಿವೆ.**
**ನಿನ್ನ ಜೀವನದ ಸಮನ್ವಯ ಮಂದಿರದಲ್ಲಿ**
**ಅನಂತಾನಂದವು ಅಸಂಖ್ಯವಾಗಿ ರೂಪುಗೊಂಡಿದೆ,**
**ಇದೋ ದೂರದಿಂದಲೂ ಹತ್ತಿರದಿಂದಲೂ ಆ ಗುಡಿಗೆ ಯಾತ್ರೆ**
**ಬರುತ್ತಿರುವವರ ನಮಸ್ಕಾರಗಳೊಡನೆ**
**ನನ್ನ ನಮಸ್ಕಾರವನ್ನೂ ನಿವೇದಿಸುತ್ತೇನೆ.**

(ಅನುವಾದ: ಕುವೆಂಪು)

ಮಹಾತ್ಮ ಗಾಂಧೀಜಿಯವರ ಪ್ರಸಿದ್ಧ ವಾಕ್ಯಗಳಿವು: "ಶ್ರೀರಾಮಕೃಷ್ಣ ಪರಮಹಂಸರ ಜೀವನಕಥೆ ಧರ್ಮದ ಆಚರಣೆಯ ಕಥೆ. ದೇವರು ಮಾತ್ರ ಸತ್ಯ, ಉಳಿದುದೆಲ್ಲ ಮಿಥ್ಯ ಎಂದು ಅವರ ಜೀವನಕತೆಯನ್ನೋದಿದ ಯಾರೊಬ್ಬರಿಗೂ ಅನಿಸದೆ ಇರದು. ಶ್ರೀರಾಮಕೃಷ್ಣರು ದೈವಿಕತೆಯ ಜೀವಂತ ರೂಪ. ಅವರ ಮಾತುಗಳು ಜ್ಞಾನಿಯೊಬ್ಬನ ಬಾಯಿಂದ ಬಂದವಷ್ಟೇ ಅಲ್ಲ, ಅವು ಜೀವನ ಚರಿತ್ರೆಯ ಪುಟಗಳೂ ಕೂಡ. ಸ್ವಂತ ಅನುಭವ ಅವುಗಳಲ್ಲಿ ಅಭಿವ್ಯಕ್ತವಾಗಿವೆ. ಆದ್ದರಿಂದಲೇ ಅವು ಓದುಗನು ತಡೆಯಲಾರದಂತಹ ನೇರ ಪ್ರಭಾವ ಬೀರುತ್ತವೆ."

"ಈ ಸಂದೇಹದ ಯುಗದಲ್ಲಿ ಶ್ರೀರಾಮಕೃಷ್ಣರು ಉಜ್ವಲ, ಜೀವಂತ ಶ್ರದ್ಧೆಯ ಉದಾಹರಣೆಯಾಗಿದ್ದಾರೆ, ಹೀಗಿಲ್ಲದಿದ್ದಲ್ಲಿ ಆಧ್ಯಾತ್ಮಿಕ ಬೆಳಕಿಲ್ಲದೆ ಇರುತ್ತಿದ್ದ, ಸಾವಿರಾರು ಸ್ತ್ರೀಪುರುಷರಿಗೆ ಶ್ರದ್ಧೆಯ ಭರವಸೆಯಾಗಿದ್ದಾರೆ. ಶ್ರೀರಾಮಕೃಷ್ಣರ ಜೀವನ ಅಹಿಂಸೆಯ ವಸ್ತುನಿಷ್ಠ ಪಾಠ. ಅವರ ಪ್ರೀತಿಗೆ ಭೌಗೋಳಿಕ ಅಥವಾ ಇತರ ಪರಿಮಿತಿಗಳಿಲ್ಲ. ಅವರ ದಿವ್ಯಪ್ರೇಮ ಎಲ್ಲರಿಗೂ ಸ್ಫೂರ್ತಿ ತರಲಿ."

ಮೊಹಮದ್ ದಾವೂದ್ ರಹಬರ್ ಎಂಬ ಸೂಫಿ ಚಿಂತಕರು ಹೀಗೆನ್ನುತ್ತಾರೆ;

"ಜಗನ್ಮಾತೆಯ ಶಿಶುವಾಗಿ, ಭಕ್ತರಾಗಿ ಧರ್ಮಗಳ ಇತಿಹಾಸದ ಪುಟಗಳಲ್ಲಿ ಶ್ರೀರಾಮಕೃಷ್ಣರು ಪ್ರಕಾಶಿಸುತ್ತಾರೆ... ಶ್ರದ್ಧಾವಂತ ಶಿಷ್ಯರನ್ನು ಅವರು ತಮ್ಮೆಡೆಗೆ ಅಯಸ್ಕಾಂತದಂತೆ ಸೆಳೆದರು. ನೂರಾರು ಭಕ್ತರು ಅವರಿಂದ ಶಾಂತಿ, ಸಮಾಧಾನ, ಆಶೀರ್ವಾದಗಳನ್ನು ಪಡೆದುಕೊಂಡರು. ಅವರು ಸಾಮಾನ್ಯರಲ್ಲ; ಅವರ ಸನ್ನಿಧಿ ಸ್ವರ್ಗ. ವಚನವೇದದಲ್ಲಿ 'ಮ' ಸಂಗ್ರಹಿಸಿಟ್ಟ ವಿಪುಲ ಸಂಭಾಷಣೆಗಳು ಸ್ಫೂರ್ತಿಯುತ, ಮನೋಹರ."

"ಶ್ರೀರಾಮಕೃಷ್ಣರಲ್ಲಿ ತ್ಯಾಗ ಇನ್ನೊಂದು ವಿಶೇಷ ಗುಣ. ಆಧುನಿಕ ನಾಗರಿಕತೆ ರಾಜಕೀಯದಿಂದ ಕೂಡಿದ್ದು ಇಂತಹ ಗುಣವನ್ನು ತೀವ್ರವಾಗಿ ನಿರಾಕರಿಸುತ್ತದೆ. ಕಾಳಜಿರಹಿತ ಹಾದಿ ಅದು ಎಂದು ರಾಜಕಾರಣಿಗಳು ತ್ಯಾಗವನ್ನು ಹೀಗೆಳೆಯುತ್ತಾರೆ. ಅಂತಹವರು ಶ್ರೀರಾಮಕೃಷ್ಣರಲ್ಲಿ ತಪ್ಪಿಸಿಕೊಳ್ಳುವ ತಟಸ್ಥ ಪ್ರವೃತ್ತಿಯನ್ನು ಹುಡುಕಿಯಾರು. ಆದರೆ ಶ್ರೀರಾಮಕೃಷ್ಣರಲ್ಲಿ ಕಾಣುವ ವೈರಾಗ್ಯ ಪ್ರಚೋದಿಸುವಂತಹದು, ತಪ್ಪಿಸಿಕೊಳ್ಳುವುದಲ್ಲ. ಧರ್ಮದ ಮಾನಸ ಕ್ಷೇತ್ರದಲ್ಲಿ ಅವರು ನಡೆಸಿದ ಪ್ರಯೋಗಗಳು ವೈಜ್ಞಾನಿಕ ಮೌಲ್ಯವನ್ನು ಹೊಂದಿವೆ. ಅವರು ಜವಾಬ್ದಾರಿಗಳಿಂದ ನುಣುಚಿಕೊಳ್ಳದೆ ಸೃಜನಶೀಲತೆಯಿಂದ ಅವನ್ನು ನಿಭಾಯಿಸಿದರು."

" ಬೌದ್ಧ, ಮುಸ್ಲಿಂ, ಕ್ರೈಸ್ತರ ಜತೆ ಸ್ನೇಹದ ನಿಕಟತೆ ಹೊಂದಿದ್ದಕ್ಕಾಗಿ ನಾನು ಅವರಿಗೆ ಗೌರವ ತೋರುವೆ. ಅನುಭವವನ್ನು ಶ್ರೀಮಂತಗೊಳಿಸಲು, ವಿಸ್ತರಿಸಲು ಇರುವ ಇತರ ಹಾದಿಗಳಿಗಿಂತ ಭಿನ್ನವಾಗಿ ಶ್ರೀರಾಮಕೃಷ್ಣರು ತಮ್ಮದೇ ಆದ ಆಸಕ್ತಿಗಳು, ಸಂಧಾನಗಳನ್ನು ತೋರಿಸಿದರು... ಧರ್ಮದಲ್ಲಿ ಬಲ, ರಾಜಕೀಯ ಬೆರೆತಿದೆ. ಜಾತ್ಯತೀತರು, ವಿಜ್ಞಾನಿಗಳು ಧಾರ್ಮಿಕ ನಾಯಕತ್ವದಲ್ಲಿನ ಅಪ್ರಾಮಾಣಿಕತೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಾರೆ... ಕುತರ್ಕಗಳಿಲ್ಲದ ಶ್ರೀರಾಮಕೃಷ್ಣರನ್ನು ಅವರದೇ ಆದ ರೀತಿಯಲ್ಲಿ ಶ್ರೇಷ್ಠ ವಿಜ್ಞಾನಿಗಳೆನ್ನಬಹುದುಲ್ಲವೆ? ಅವರ ಆನಂದಮಯ ಜೀವನದಲ್ಲಿ ನಾವು ಧರ್ಮ, ವಿಜ್ಞಾನಗಳ ಸಂತೋಷಕರ ಬೆಸುಗೆಯನ್ನು ಕಾಣುತ್ತೇವೆ."

ರಷ್ಯಾ ದೇಶದ ಪ್ರಖ್ಯಾತ ಚಿತ್ರಕಾರರಾದ ನಿಕೋಲಸ್ ಡಿ ರೋರಿಕ್ ಹೀಗೆ ಬರೆಯುತ್ತಾರೆ; "ಶ್ರೀರಾಮಕೃಷ್ಣರು ಶ್ರೇಯಸ್ಕರವಾದ ಶಾಶ್ವತ ಮೌಲ್ಯಗಳನ್ನು ನಮಗೆ ತೋರಿಸಿದ್ದಾರೆ. ಅವರ ನುಡಿಗಳು ನಮಗೆ ಇಂದು ಅತ್ಯಂತ ಪ್ರಸ್ತುತ ಮತ್ತು ಅವುಗಳಲ್ಲಿ ಸಂದೇಹಕ್ಕೆ ಆಸ್ಪದವೇ ಇಲ್ಲ. ಆಧ್ಯಾತ್ಮಿಕತೆಯನ್ನು ತಪ್ಪಾಗಿ ತಿಳಿದು ವಿಡಂಬನೆ ಮಾಡುವ ಜನರಿಗೆ ಉತ್ತರವಾಗಿ ಉಜ್ವಲ, ಸಕಾರಾತ್ಮಕ ದೃಢೀಕರಣ ವಾಗಿದೆ, ಶ್ರೀರಾಮಕೃಷ್ಣರ ಅಮೂಲ್ಯ ಜೀವನ."

ಪ್ರಪಂಚದ ಅತ್ಯಂತ ಶ್ರೇಷ್ಠ ಇತಿಹಾಸಜ್ಞರೆಂದು ಪರಿಗಣಿಸಲಾದ ಆರ್ನಾಲ್ಡ್ ಟಾಯ್ನ್‌ಬೀ ಅವರು ಶ್ರೀರಾಮಕೃಷ್ಣರನ್ನು ಮಾನವ ಜನಾಂಗದ ಆಶಾಕಿರಣವೆಂದೇ ಬಣ್ಣಿಸಿದ್ದಾರೆ: " ಶ್ರೀರಾಮಕೃಷ್ಣರ ಸಂದೇಶ ಅದ್ವಿತೀಯ; ಏಕೆಂದರೆ ಅದು ಕ್ರಿಯೆಯಲ್ಲಿ ಅಭಿವ್ಯಕ್ತ. ಈ ಸಂದೇಶ ಹಿಂದೂಧರ್ಮದ ಸಾರ್ವಕಾಲಿಕ ಸಂದೇಶವೇ ಆಗಿದೆ. ಶ್ರೇಷ್ಠ ಧರ್ಮಗಳೆಲ್ಲ ಸತ್ಯವಾದ ದರ್ಶನಗಳು, ಸರಿಯಾದ ಜೀವನಮಾರ್ಗಗಳು, ಇವೆಲ್ಲವೂ ಮಾನವಜನಾಂಗಕ್ಕೆ ಅತಿ ಅಗತ್ಯ. ಏಕೆಂದರೆ ಒಂದೇ ಸತ್ಯದ ವಿವಿಧ ನೋಟಗಳನ್ನು ಇವು ನೀಡುತ್ತವೆ."

"ಮಾನವ ಚರಿತ್ರೆಯಲ್ಲಿಯೇ ಅತಿ ಅಪಾಯಕಾರಿಯಾದ ಇಂದಿನ ಕ್ಷಣದಲ್ಲಿ ಮಾನವ ಜನಾಂಗದ ಮುಕ್ತಿಗೆ ದಾರಿ ಭಾರತೀಯ ಮಾರ್ಗವೊಂದೇ. ಚಕ್ರವರ್ತಿ ಅಶೋಕ, ಮಹಾತ್ಮ ಗಾಂಧೀಜಿ ಯವರ ಅಹಿಂಸಾತತ್ತ್ವ, ಶ್ರೀರಾಮಕೃಷ್ಣರ ಧರ್ಮಸಮನ್ವಯದ ಪ್ರಮಾಣ – ಇವು ಮಾತ್ರವೇ ಈ ಅಣುಯುಗದಲ್ಲಿ ನಮ್ಮನ್ನು ನಾವು ನಾಶಗೊಳಿಸಿಕೊಳ್ಳದೆ ಇರಲು ಇರುವ ಒಂದೇ ದಾರಿ. ಮಾನವ ಜನಾಂಗ ಒಂದು ಕುಟುಂಬವಾಗಿ ಬೆಳೆಯಲು ಬೇಕಾದ ದೃಷ್ಟಿಕೋನ ಮತ್ತು ಚೈತನ್ಯಗಳು ಇವುಗಳಲ್ಲಿವೆ."

ಪಾಶ್ಚಾತ್ಯ ಸೂಫಿ ಚಿಂತಕ ಫ್ರಿಜಾಫ್ ಸ್ಕೂನ್ ಶ್ರೀರಾಮಕೃಷ್ಣರ ಬಗ್ಗೆ ಹೀಗೆ ಹೇಳುತ್ತಾರೆ : "ಶ್ರೀರಾಮಕೃಷ್ಣರು ಒಬ್ಬ ವಿಶ್ವಮಾನವ ರಾಗಿದ್ದರು. ಯಾವುದೇ ಒಂದು ಪ್ರತ್ಯೇಕ ವರ್ಗಕ್ಕೆ ಸೇರಿಸಲಾಗದ ವೈಶಿಷ್ಟ್ಯವು ಅವರಲ್ಲಿದೆ. ಅವರು ಧರ್ಮಗಳ ಆಂತರಿಕ ಏಕತೆಯ ಜೀವಂತ ಪ್ರತಿಪಾದಕರಾಗಿದ್ದರು."

ಕ್ರಿಸ್ಟೊಫರ್ ಇಷರ್‌ವುಡ್ ಅಮೆರಿಕದ ಒಬ್ಬ ಸುವಿಖ್ಯಾತ ಲೇಖಕ. ವೇದಾಂತ ಆಂದೋಲನದ ಸಂಪರ್ಕಕ್ಕೆ ಬಂದು ತಮ್ಮ ಜೀವನಮಾರ್ಗವನ್ನು ಪರಿವರ್ತಿಸಿಕೊಂಡ ಅವರು ಶ್ರೀರಾಮಕೃಷ್ಣರ ಮತ್ತು ಒಟ್ಟಾರೆಯಾಗಿ ರಾಮಕೃಷ್ಣ ಆಂದೋಲನದ ಚರಿತ್ರೆಯನ್ನು ಆಪ್ಯಾಯಮಾನವಾಗಿ ಬಣ್ಣಿಸುವ 'ಶ್ರೀರಾಮಕೃಷ್ಣರು ಮತ್ತು ಅವರ ಶಿಷ್ಯರು' ಎಂಬ ಗ್ರಂಥವನ್ನು ರಚಿಸಿದ್ದಾರೆ. ಅದರ ಮೊದಲ ವಾಕ್ಯಗಳಲ್ಲಿ ಅವರು ಹೀಗೆ ಹೇಳುತ್ತಾರೆ : " ಇದು ಅದ್ಭುತವೊಂದರ ಕಥೆ (This is a story of a phenomenon). ಶ್ರೀರಾಮಕೃಷ್ಣರನ್ನು ಸಂತ, ಅವತಾರ, ದಿವ್ಯ ಮಾನವ ಎಂಬ ಪದಗಳಿಂದ ಹೆಸರಿಸುವ ಬದಲು ಈ 'ಅದ್ಭುತ' ಎಂಬ ಪದವನ್ನು ಬಳಸಿದ್ದೇನೆ. ಏಕೆಂದರೆ ಆ ಪದಗಳೆಲ್ಲ ಭಾವನಾತ್ಮಕವಾಗಿ ಮಿಶ್ರಸಂಬಂಧಗಳನ್ನು ಹೊಂದಿದ್ದು ಕೆಲವರನ್ನು ಆಕರ್ಷಿಸಿದರೆ, ಉಳಿದವರನ್ನು ವಿಮುಖರನ್ನಾಗಿ ಮಾಡುತ್ತವೆ. ಅದ್ಭುತವೆಂದರೆ ಅಸಾಮಾನ್ಯ ಮತ್ತು ನಿಗೂಢ. ಶ್ರೀರಾಮಕೃಷ್ಣರು ಅಸಾಮಾನ್ಯರು ಮತ್ತು ಅವರನ್ನರಿತುಕೊಳ್ಳಲು ಯೋಗ್ಯರಾದವರಿಗೂ ನಿಗೂಢರು. ಅದ್ಭುತ ಯಾವಾಗಲೂ ಒಂದು ವಸ್ತುಸ್ಥಿತಿ, ಅನುಭವಕ್ಕೆ ಗ್ರಾಹ್ಯ. ಈ ಬಗೆಯಲ್ಲೇ ನಾನು ಶ್ರೀರಾಮಕೃಷ್ಣರನ್ನು ನೋಡುವುದು."

"ನಮ್ಮ ಮೌಲ್ಯನಿರ್ಣಯಗಳು ಹೆಚ್ಚು ಕಡಿಮೆ ಬೆಲೆಯಿರದಷ್ಟು ಮಟ್ಟಿಗೆ, ಆಧುನಿಕ ಜಾಹೀರಾತು ಅವುಗಳನ್ನು ಉಬ್ಬಿಸಿದೆ. ಎಲ್ಲ ವಸ್ತು, ವ್ಯಕ್ತಿಗಳೂ ಅತ್ಯುತ್ತಮ ಎಂದು ಅವುಗಳನ್ನು ಪ್ರಚಾರ ಮಾಡುವವನು ಹೇಳುತ್ತಾನೆ. ಸ್ಪರ್ಧೆಯ ಧ್ವನಿಯನ್ನು ಬಿಟ್ಟು ನಾನು ಹೇಳುವುದಿಷ್ಟು: ಸುಮಾರಾಗಿ ವರ್ತಮಾನ ಇತಿಹಾಸದಲ್ಲಿ ಆಗಿಹೋದ ಶ್ರೀರಾಮಕೃಷ್ಣರ ಜೀವನ ಉಲ್ಲೇಖಗಳಿಂದ ಕೂಡಿದೆ. ಹಿಂದಿನ ಇಂತಹ ಇತರ ಅದ್ಭುತ ವ್ಯಕ್ತಿಗಳ ಜೀವನಕ್ಕಿಂತ ಈ ಜೀವನ ಅಧಿಕೃತ ಗುಣವನ್ನು ಹೊಂದಿದೆ. ದಂತಕತೆಗಳು, ಹೇಳಿಕೆಗಳು ಮತ್ತು ಹರಿದ ಶಿಥಿಲ ಹಸ್ತಪ್ರತಿಗಳನ್ನು ಅವಲಂಬಿಸ ಬೇಕಾಗಿಲ್ಲದೆ, ಓದುಗನೇ ನೇರವಾಗಿ ಶ್ರೀರಾಮಕೃಷ್ಣರ ನಡೆ ನುಡಿಗಳಿಂದ ಅವರ ಬಗ್ಗೆ ಒಂದು ಅಭಿಪ್ರಾಯಕ್ಕೆ ಬರಬಹುದು."

ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಶ್ರೀಅರವಿಂದರ ಪಾತ್ರ ಚಿರಮಾನ್ಯ. ಹಾಗೆಯೇ ಅವರು, ತದನಂತರದ ದಿನಗಳಲ್ಲಿ, ಆಧ್ಯಾತ್ಮಿಕ ಶಿಖರವಾಗಿ ಒಡಮೂಡುವುದನ್ನು ನಾವು ನೋಡುತ್ತೇವೆ. ಅವರ ದಾರ್ಶನಿಕ ಮತ್ತು ಪ್ರವಾದಿಕ ದೃಷ್ಟಿ ಶ್ರೀರಾಮಕೃಷ್ಣರನ್ನು ಹೀಗೆ ಕಂಡಿತು: "ಇನ್ನು ಐನೂರು ವರ್ಷಗಳ ಕಾಲ ಜಗತ್ತು ಶ್ರೀರಾಮಕೃಷ್ಣರಂತಹ ಮತ್ತೊಬ್ಬರನ್ನು ಕಾಣಬಯಸದು. ಅವರು ಬಿಟ್ಟು ಹೋಗಿರುವ ಅಗಾಧ ಚಿಂತನೆಯ ಸಂಪತ್ತನ್ನು ಮೊದಲು ಕಾರ್ಯಗತಗೊಳಿಸಬೇಕು; ಅವರಿಂದ ಹೊರಹೊಮ್ಮಿದ ಆಧ್ಯಾತ್ಮಿಕ ಶಕ್ತಿ ಕಾರ್ಯಸಿದ್ಧಿಯಲ್ಲಿ ಪರಿಣಮಿಸಬೇಕು. ಅಲ್ಲಿಯ ತನಕ ಮತ್ತಷ್ಟು ಬೇಕು ಎಂದು ಕೇಳಲು ನಮಗೆ ಅಧಿಕಾರವಾದರೂ ಎಲ್ಲಿದೆ? ಬಂದರೂ ಹೆಚ್ಚಾದುದನ್ನು ಬಳಸುವುದಾದರೂ ಎಲ್ಲಿ?"

ಇದುವರೆಗೂ ಭಾರತದ ಮತ್ತು ವಿಶ್ವದ ಇತರೆಡೆಗಳಲ್ಲಿನ ಹಲವಾರು ಚಿಂತಕರು ಶ್ರೀರಾಮಕೃಷ್ಣರ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ನೋಡಿದೆವು. ಆದರೆ ಬ್ರಹ್ಮಾನಂದ ಪ್ರಕಾಶಕರೂ, ಅನಂತವೇ ಸಾಂತವಾಗಿ ಘನೀಭವಿಸಿ ಬಂದವರೂ ಆದ ಶ್ರೀರಾಮ ಕೃಷ್ಣರನ್ನು ಮಾನವ ಸೀಮಿತ ಬುದ್ಧಿಯಿಂದ ಅರ್ಥಮಾಡಿಕೊಳ್ಳಲು ಸಾಧ್ಯವೇ? ಹಾಗೆಂದೇ ಶ್ರೀರಾಮಕೃಷ್ಣರೇ ಗಿರೀಶಚಂದ್ರ ಘೋಷನನ್ನು "ನನ್ನ ಬಗ್ಗೆ ನೀನು ಏನು ತಿಳಿದುಕೊಂಡಿರುವೆ?" ಎಂದು ಕೇಳಿದಾಗ, ಅವನು ಕೊಟ್ಟ ಉತ್ತರವಿದು:

**"ವ್ಯಾಸ, ವಾಲ್ಮೀಕಿ ಮಹರ್ಷಿಗಳಿಗೇ ನಿಮ್ಮನ್ನು ವಿವರಿಸಲು ಅಸಾಧ್ಯವಾಗಿರುವಾಗ ಅದು ನನ್ನಿಂದ ಸಾಧ್ಯವೇ?"**